

# ಮಣ್ಣಿನ ಭವನ ಕಂಪನಿಗೆ ಬಿಕರಿ!

ಆಘಾತವಾಗುವಂತೆ ಅನಿರೀಕ್ಷಿತವಾದ್ದು ಘಟಿಸಿತು. ವಾಮನ, ಪಾಂಡುರಂಗ ಮತ್ತು ಶಾಂತಾರಾಮ ಮೂವರೂ ಸೇರಿ, ಮನೆಯಲ್ಲಿ ಪಾಲು ಕೇಳಿ, ವಕೀಲರ ಮೂಲಕ ಪತ್ರ ಕಳಿಸಿದರು. ತಮ್ಮ ಅನುವಂಶಿಕವಾಗಿ ಬಂದ, ಸದ್ಯ ಅವಿಭಕ್ತ ಕುಟುಂಬ ವಾಸವಿರುವ ಕಟ್ಟಡದಲ್ಲಿ ತಮಗೆಲ್ಲರಿಗೂ ಸಮಪಾಲು ಬರಬೇಕು. ಬೇಕಿದ್ದರೆ ತಂದೆಯ ನಾಲ್ಕನೇ ಪಾಲಿನ ಬದಲಿಗೆ, ಗದ್ದೆ ತೋಟ ಮುಂತಾದ ಉಳಿದ ಆಸ್ತಿಗಳಲ್ಲಿ ತಮಗಿರುವ ಹಕ್ಕನ್ನು ಬಿಟ್ಟುಕೊಡಲು ಒಪ್ಪಿಗೆಯನ್ನೂ ಸೇರಿಸಿದ್ದರು. ಉದ್ದೇಶ ಸ್ಪಷ್ಟವಾಗಿತ್ತು. ಕಟ್ಟಡವನ್ನು ಕಂಪನಿಗೆ ಮಾರುವುದು ನಿಶ್ಚಯವಾಗಿತ್ತು.

ದೇಶ್ವಂತರು ತೀರ ವಿಚಲಿತರಾದರು. ತುಕದಿಂದ ಬಾಳಿದ ಮನೆತನದ ಹೆಸರು ಬೀದಿರಂಪವಾಗಲಿತ್ತು. ಸಾಲದ್ದಕ್ಕೆ ಅದಕ್ಕೆ ತಳಕು ಹಾಕಿಕೊಂಡ ಸಂಗತಿಗಳು ಸಾರ್ವಜನಿಕರ ಅನವಶ್ಯಕ ಕುತೂಹಲ ಕೆರಳಿಸುತ್ತಾ ಮನರಂಜನೆಯಾಗಲಿರುವುದನ್ನು ಕಲ್ಪಿಸಿಕೊಂಡೆ ಸಂಕಟವಾಗುತ್ತಿತ್ತು. ಯಾರೋ ಅಕಾರಣ ತಮಗೆ ಸೋಲಿನ ರುಚಿ ತೋರಿಸುತ್ತಿದ್ದಾರೆ ಅನ್ನುವ ಅಂಶ ಅವಮಾನವಾಗಿ ಘಾತಿಸುತ್ತಿತ್ತು. ವಿಚಿತ್ರವೆಂದರೆ, ಇಲ್ಲಿ ಪ್ರತಿಸ್ಪರ್ಧಿ ಅಗೋಚರನಾಗಿದ್ದ! ತಾವು ತಮ್ಮ ಮಕ್ಕಳು ಹೊಡೆದಾಡುತ್ತಾ ಜನರಿಗೆ ಕಾಣಿಸುತ್ತಿದ್ದರು! ಹಿಂದು ಅವಿಭಜಿತ ಪಿತ್ರಾರ್ಜಿತ ಆಸ್ತಿಯಲ್ಲಿ ಕಾನೂನು ಪ್ರಕಾರ, ನಾಲ್ಕು ತಲೆಮಾರುಗಳವರೆಗಿನವರಿಗೆ ಭಾಗ ಕೇಳುವ ಹಕ್ಕಿದೆ. ಇದನ್ನು ತಂದೆ ಬದುಕಿದ್ದಾಗೇ ಮಕ್ಕಳು ಕೇಳಬಹುದು. ಇದವರಿಗೆ ಗೊತ್ತಿದ್ದ ಸಂಗತಿಯೆ.

***

ಪಾಂಡುರಂಗ ಮತ್ತು ಶಾಂತಾರಾಮನ ಕುಟುಂಬದವರು ಖುಷಿಯಲ್ಲಿ ತೇಲುತ್ತಿದ್ದರು. ದೀಪಾವಳಿಯಾದ ವಾರಕ್ಕೆ, ಪ್ರಸಿದ್ಧ ಡಿವೈನ್ ಫೈಬರ್ಸ್ ಕಂಪನಿಯ ಪ್ರತಿನಿಧಿ ಅವರ ಆಫೀಸಿಗೆ ಬಂದು ಬಹುಮಾನ ಬಂದ ಸುದ್ದಿ ಹೇಳಿದ್ದ. ದೀಪಾವಳಿಗೆ ಅವರು ಹೊಸಬಟ್ಟೆ ಖರೀದಿಸಿದ್ದರು. ರಶೀದಿ ನಂಬರುಗಳ ಆಧಾರದಲ್ಲಿ ಲಕಿಡ್ರಾ ಮಾಡಿದಾಗ ಶಾಂತಾರಾಮನ ನಂಬರಿಗೆ ಬಂದಿತ್ತು. ಗಂಡ ಹೆಂಡತಿಗೆ ಲೋನಾವಳದ ಪ್ರಸಿದ್ಧ ರೆಸಾರ್ಟಿನಲ್ಲಿ ಮೂರು ದಿನ ಉಚಿತ ವಾಸ್ತವ್ಯದ ಕೊಡುಗೆ! ಸಂಬಂಧಿಸಿದ ಕಾಗದ ಪತ್ರಗಳನ್ನು ಪ್ರತಿನಿಧಿ ಕೊಟ್ಟ. ರಾತ್ರಿ ಫೋನು ಮಾಡಿದ ಶಾಂತಾರಾಮನಿಗೆ ಸಂತೋಷ ಇಮ್ಮಡಿಯಾಗಿತ್ತು. ಪಾಂಡುರಂಗನಿಗೂ ಈ ಕೊಡುಗೆ ಸಿಕ್ಕಿತ್ತು!

ಜನವಸತಿಯಿಂದ ದೂರ, ನಿರ್ಮಲ ನಿಸರ್ಗದ ನಡುವೆ ಸುಂದರವಾಗಿ ರೆಸಾರ್ಟ್ ನಿರ್ಮಿಸಲಾಗಿತ್ತು. ಭೂಮಿಗೆ ಹೊಂದುವಂತೆ, ಕೇವಲ ಕಂದುಬಣ್ಣದ ಇಟ್ಟಿಗೆಗಳನ್ನು ಕಲಾತ್ಮಕವಾಗಿ ಬಳಸಿದ್ದರು. ಹೊರಗೆ ಸಿಮೆಂಟಿನ ಗಿಲಾಯ ಮಾಡಿರಲಿಲ್ಲ. ಒಳಗಡೆ ಗೋಡೆಗೆಲ್ಲ ಕಂದುಮಣ್ಣನ್ನೆ ಕಲಸಿ ದೇಶಿ ಪದ್ಧತಿಯಲ್ಲಿ ಲೇಪಿಸಿದ್ದರು. ಕಟ್ಟಡ ಸಮುಚ್ಚಯ ಸುತ್ತಲ ಪರಿಸರದಲ್ಲಿ, ನೆಲದ ಭಾಗದಂತೆ ಅಡಕವಾಗಿತ್ತು. ಅಲ್ಲಿಯ ವೈಶಿಷ್ಟ್ಯವೆಂದರೆ ಆಹಾರದ ರೀತಿ! ರಾಜಸ್ಥಾನದ ಹಳ್ಳಿಯಲ್ಲಿ ವಾಸಿಸುತ್ತಿರುವ ಅನುಭವ ಬರುವಂತೆ ಮಾಡಲಾಗಿತ್ತು. ಕೆಳಗೆ ಮಣ್ಣಿನಲ್ಲೆ ಮಾಡಿದ ಒರಟಾದ ನೆಲ. ಅದರ ಮೇಲೆ ಕುಳಿತುಕೊಳ್ಳಲು ಕಲಾತ್ಮಕ ಮರದ ಮಣೆಗಳು. ಎದುರಿಗಿಡುವ ಮಣೆಯ ಮೇಲೆ